1ನೇ ಅಪರ ಮುಖ್ಯ ಮಹಾನಗರ ದಂಡಾಧಿಕಾರಿಗಳ ನ್ಯಾಯಾಲಯ, ಬೆಂಗಳೂರು.

ಸಿಸಿ ನಂ. 10101/2012

| | | | |
|---|---|---|---|
| ಹೆಸರು | : | ಸಂಜಯ್ ಎಸ್.ಬಡಿಗರ್ | ಪ್ರಾಸಾಃ 6 |
| ತಂದೆಯ ಹೆಸರು | : | ಶೇಖರಪ್ಪ.ಇ. ಬಡಿಗರ್ | ಚಾಸಾಃ 58 |
| ವಯಸ್ಸು | : | 41 ವರ್ಷ | |
| ಉದ್ಯೋಗ | : | ಖಾಸಗಿ ನೌಕರ | |
| ವಾಸ | : | ಬೆಂಗಳೂರು. | |

ದಿಃ 15.04.2021 ರಂದು ಪ್ರಮಾಣೀಕರಿಸಲಾಯಿತು.

ಮುಖ್ಯ ವಿಚಾರಣೆಃ ಹಿರಿಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ದಿಃ 24.06.2011 ರಂದು ತಯಾರಿಸಿದ ಮಹಜರ್ ತೋರಿಸಲಾಗಿ ಸಾಕ್ಷಿಯು ತನ್ನ ಸಹಿಯನ್ನು ಗುರುತಿಸಿದ್ದು, ಮಹಜರ್‌ನ್ನು ನಿಪಿ.26 ಎಂದು , ಸಾಕ್ಷಿಯ ಸಹಿಯನ್ನು ನಿಪಿ.26(ಎ) ಎಂದು ಗುರುತಿಸಲಾಯಿತು. ಸದರಿ ಸಹಿಯನ್ನು ಸಿಸಿಬಿ ಕಚೇರಿಯಲ್ಲಿ ಮಾಡಿರುತ್ತೇನೆ. ಪ್ರೆಸಿಡೆನ್ಸಿ ಗ್ರೂಪ್‌ನವರು ಜನರಿಗೆ ನಿವೇಶನ ಕೊಡಿಸುತ್ತೇವೆಂದು ಮೋಸ ಮಾಡಿದ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಲಾಗಿತ್ತು. ಅವುಗಳನ್ನು ಅಮಾನತ್ತುಪಡಿಸಿಕೊಂಡ ಬಗ್ಗೆ ಮಹಜರ್ ತಯಾರಿಸಿರುತ್ತಾರೆ. ಮಹಜರ್ ಸಮಯದಲ್ಲಿ ಸುಮಾರು 14 ದಾಖಲೆಗಳನ್ನು ತನಿಖಾಧಿಕಾರಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನನ್ನೊಂದಿಗೆ ರಾಜೀವ್ ಸಹಿ ಮಾಡಿರುತ್ತಾನೆ. ಶ್ರೀ ವೇಲು ಎನ್ನುವ ವ್ಯಕ್ತಿ ದಾಖಲೆಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಅಮಾನತ್ತುಪಡಿಸಿಕೊಳ್ಳಲಾಗಿರುತ್ತದೆ.

ಪಾಟೀ ಸವಾಲುಃ ಆರೋಪಿ ಪರ ಶ್ರೀ ವಿಎಸ್ ವಕೀಲರಿಂದಃ-

ಪೊಲೀಸ್‌ರು ನನಗೆ ಪಂಚನಾಮೆಗೆ ಬರುವಂತೆ ನೋಟೀಸ್ ನೀಡಿಲ್ಲ. ನಾನು ಸಿಸಿಬಿ ಕಚೇರಿಗೆ ಹೋಗಿಯೆ ಇಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಯಾವುದೇ

ದಾಖಲೆಗಳನ್ನು ಅಮಾನತ್ತುಪಡಿಸಿಲ್ಲ ಎಂದರೆ ಸರಿಯಲ್ಲ. ಖಾಲಿ ಕಾಗದಕ್ಕೆ ಸಹಿ ಹಾಕಿರುತ್ತೇನೆಂದರೆ ಸರಿಯಲ್ಲ. ಪೊಲೀಸ್‌ನವರ ಮಾತು ಕೇಳಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆಂದರೆ ಸರಿಯಲ್ಲ.

ಪಾಟೀ ಸವಾಲು: 2ನೇ ಆರೋಪಿ ಪರ ವಕೀಲರಿಂದ:-

1ನೇ ಆರೋಪಿಯ ಪಾಟಿ ಸವಾಲನ್ನೇ ಅನುಮೋದಿಸಿಕೊಂಡಿರುತ್ತಾರೆ.

ಮರುವಿಚಾರಣೆ: ಇಲ್ಲ

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲಾಯಿತು.)

ಓ. ಹೇ. ಕೇ. ಸ. ಇ.

1ನೇ ಅ. ಮು. ಮ. ದಂ. ನ್ಯಾಯಾಲಯ

**ಪಿಡಬ್ಲ್ಯೂ: 6**